ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

ರಾಜ್ಯ ಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ,
ಫೆಬ್ರವರಿ/ಮಾರ್ಚ್ — 2024

# STATE LEVEL SSLC PREPARATORY EXAMINATION, FEBRUARY/MARCH — 2024

ವಿಷಯ ಸಂಕೇತ : **85-K** Subject Code : **85-K**

## ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

(ಕನ್ನಡ ಮಾಧ್ಯಮ / Kannada Medium)

ದಿನಾಂಕ : 02. 03. 2024 ] [ Date : 02. 03. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

---

*ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : $8 \times 1 = 8$**

1. ಕಾನ್‌ಸ್ಟಾಂಟಿನೋಪಲ್‌ನ್ನು 'ಯುರೋಪಿನ ವ್ಯಾಪಾರದ ಹೆಬ್ಬಾಗಿಲು' ಎಂದು ಕರೆಯಲಾಗುತ್ತಿತ್ತು. ಏಕೆಂದರೆ,

   (A) ಅದು ಯುರೋಪಿನ ಗಡಿಯಾಗಿತ್ತು

   (B) ಅದು ಅಂತಾರಾಷ್ಟ್ರೀಯ ಜಲಮಾರ್ಗದ ಬಂದರು ಮಾರ್ಗವಾಗಿತ್ತು

   (C) ಅದು ವಿಶ್ವಸಂಸ್ಥೆಯ ಕೇಂದ್ರವಾಗಿತ್ತು

   (D) ಅದು ಅಂತಾರಾಷ್ಟ್ರೀಯ ವ್ಯಾಪಾರದ ಕೇಂದ್ರವಾಗಿತ್ತು

2. ಗೋವಾ 1987 ರಲ್ಲಿ ಒಂದು ರಾಜ್ಯವಾಯಿತು. ರಾಜ್ಯವಾಗುವುದಕ್ಕೆ ಮುನ್ನ ಅದು

   (A) ಪೋರ್ಚುಗೀಸರ ವಸಾಹತಾಗಿತ್ತು

   (B) ಸ್ವತಂತ್ರ ರಾಜ್ಯವಾಗಿತ್ತು

   (C) ಕೇಂದ್ರಾಡಳಿತ ಪ್ರದೇಶವಾಗಿತ್ತು

   (D) ಕರ್ನಾಟಕದ ಒಂದು ಭಾಗವಾಗಿತ್ತು

3. ರಷ್ಯಾಕ್ರಾಂತಿ ಮತ್ತು ಫ್ರೆಂಚ್ ಕ್ರಾಂತಿಗಳು ಪುಷ್ಟಿ ನೀಡಿರುವುದು

   (A) ಮಾನವ ಹಕ್ಕುಗಳ ಹೋರಾಟಕ್ಕೆ (B) ಏಕೀಕರಣ ಚಳುವಳಿಗೆ

   (C) ಮಹಾಯುದ್ಧಗಳಿಗೆ (D) ಕೈಗಾರಿಕಾ ಕ್ರಾಂತಿಗೆ

KABRG-5030

4. ಬಾಲ್ಯವಿವಾಹವನ್ನು ತಡೆಯಲು ನಾವು ಕರೆಮಾಡಿ ಮಾಹಿತಿಯನ್ನು ನೀಡುವ ಉಚಿತ ಸಹಾಯವಾಣಿ

(A) 101 (B) 108

(C) 1089 (D) 1098

5. 'ಮಾನವಕುಲ ತಾನೊಂದೇ ವಲಂ' ಎಂದು ಹೇಳಿದವರು

(A) ಪಂಪ (B) ರನ್ನ

(C) ಜನ್ನ (D) ಪೊನ್ನ

6. ಭಾರತದ 'ಸಿಲಿಕಾನ್ ಸಿಟಿ' ಇರುವುದು

(A) ಮಹಾರಾಷ್ಟ್ರದಲ್ಲಿ (B) ತಮಿಳುನಾಡಿನಲ್ಲಿ

(C) ಕರ್ನಾಟಕದಲ್ಲಿ (D) ಗುಜರಾತ್‌ನಲ್ಲಿ

7. ರಾಜೇಶನು ತನ್ನ ಪಾಸ್‌ಬುಕ್‌ನಲ್ಲಿ ಆತನ ಖಾತೆಗೆ ಬ್ಯಾಂಕು ಸೇವಾಶುಲ್ಕ ವಿಧಿಸಿರುವುದನ್ನು ಗಮನಿಸುತ್ತಾನೆ. ಆತನು ಹೊಂದಿರುವ ಬ್ಯಾಂಕ್ ಖಾತೆಯು

(A) ಉಳಿತಾಯ ಖಾತೆ (B) ಚಾಲ್ತಿ ಖಾತೆ

(C) ನಿಶ್ಚಿತ ಠೇವಣಿ ಖಾತೆ (D) ಆವರ್ತ ಠೇವಣಿ ಖಾತೆ

8. 'ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ' ಎಂಬ ಪುಸ್ತಕವನ್ನು ಬರೆದವರು

(A) ಸರ್ ಎಂ. ವಿಶ್ವೇಶ್ವರಯ್ಯ (B) ಜವಾಹರಲಾಲ್ ನೆಹರೂ

(C) ಮಹಾತ್ಮಾ ಗಾಂಧಿ (D) ಬಾಲಗಂಗಾಧರ ತಿಲಕ್

KABRG-5030

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : $8 \times 1 = 8$

9. ದಿವಾನಿ ಅದಾಲತ್‌ಗಳೆಂದರೇನು ?

10. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ ಏಕೆ ಸ್ಥಾಪಿಸಿದರು ?

11. ಪಂಚಶೀಲ ತತ್ವಗಳಿಗೆ ಸಹಿ ಹಾಕಿದ ದೇಶಗಳಾವವು ?

12. ಶ್ರಮ ವಿಭಜನೆ ಎಂದರೇನು ?

13. ಕೋಲ್ಕತ್ತದಲ್ಲಿರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರೇನು ?

14. ಪ್ರವಾಹಗಳೆಂದರೇನು ?

15. ಉದ್ಯಮಿ ಎಂದರೆ ಯಾರು ?

16. ಮುಂಗಡಪತ್ರ ಎಂದರೇನು ?

KABRG-5030

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $8 \times 2 = 16$

17. ನಮ್ಮ ದೇಶದ ಪ್ರಗತಿಗೆ ಕೋಮುವಾದವು ಹೇಗೆ ಅಡ್ಡಿಯಾಗಿದೆ ?

ಅಥವಾ

ಅಂತಾರಾಷ್ಟ್ರೀಯ ಶಾಂತಿ ಕಾಪಾಡುವಲ್ಲಿ ನಿಶ್ಯಸ್ತ್ರೀಕರಣ ಒಪ್ಪಂದಗಳು ಹೇಗೆ ಸಹಕಾರಿಯಾಗಿವೆ ?

18. ಭಾರತದಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಕೈಗೊಂಡಿರುವ ಶಾಸನಾತ್ಮಕ ಕ್ರಮಗಳೇನು ?

ಅಥವಾ

ಭಾರತದಲ್ಲಿ ನಿರುದ್ಯೋಗ ನಿವಾರಣೆಗೆ ಕೈಗೊಂಡಿರುವ ಪರಿಹಾರ ಕ್ರಮಗಳೇನು ?

19. 'ವೈದಿಕ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವಲ್ಲಿ ದಯಾನಂದ ಸರಸ್ವತಿಯವರು ಪ್ರಮುಖ ಪಾತ್ರವಹಿಸಿದರು.' ಸಮರ್ಥಿಸಿ.

20. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ವಿಮುಕ್ತಿಗೊಳಿಸಲಾಯಿತು, ವಿವರಿಸಿ.

21. 'ಭಾರತದಲ್ಲಿ ಚಳಿಗಾಲವು ಇತರ ಋತುಗಳಿಗಿಂತ ಅತ್ಯಂತ ಕಡಿಮೆ ಮಳೆ ಬೀಳುವ ಋತುಮಾನವಾಗಿದೆ.' ದೃಢೀಕರಿಸಿ.

22. ಭಾರತದಲ್ಲಿ ಕಂಡುಬರುವ ಪರಮಾಣು ಖನಿಜಗಳಾವವು ?

23. ಸುಗ್ಗಿ ಪೂರ್ವ ತಂತ್ರಜ್ಞಾನವು ಸಣ್ಣ ರೈತರಿಗೆ ಹೇಗೆ ಉಪಯುಕ್ತವಾಗಿರಲಿಲ್ಲ?

24. ಬ್ಯಾಂಕ್ ಖಾತೆಯ ವಿಧಗಳನ್ನು ಹೆಸರಿಸಿ.

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

25. ನಾಲ್ವಡಿ ಕೃಷ್ಣರಾಜ ಒಡೆಯರನ್ನು 'ರಾಜರ್ಷಿ' ಎಂದು ಕರೆಯಲಾಗಿದೆ, ವಿವರಿಸಿ.

ಅಥವಾ

ಡಚ್ಚರ ಅಧಿಕಾರವನ್ನು ಮಾರ್ತಾಂಡ ವರ್ಮನು ಹೇಗೆ ನಿಯಂತ್ರಿಸಿದನು ಎಂಬುದನ್ನು ವಿವರಿಸಿ.

[ Turn over



KABRG-5030

26. ಭಾರತದಲ್ಲಿ ಅರಣ್ಯಗಳನ್ನು ಸಂರಕ್ಷಿಸುವುದು ಅಗತ್ಯವಾಗಿದೆ. ಏಕೆ ?

ಅಥವಾ

ಭಾರತದಲ್ಲಿ ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ. ಏಕೆ ?

27. ಸರ್ಕಾರವು ಹಲವು ಮೂಲಗಳಿಂದ ಆದಾಯವನ್ನು ಹೇಗೆ ಸಂಗ್ರಹಿಸುತ್ತದೆ ?

KABRG-5030

ಅಥವಾ

ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರ ಹೇಗೆ ಹಿರಿದಾಗಿದೆ ?

28. ಒಬ್ಬ ವ್ಯಕ್ತಿಯು ಉದ್ಯಮಿಯಾಗಲು ಹೊಂದಿರಬೇಕಾದ ಲಕ್ಷಣಗಳೇನು ?

ಅಥವಾ

ಗ್ರಾಹಕ ನ್ಯಾಯಾಲಯದಲ್ಲಿ ದೂರು ಸಲ್ಲಿಸಲು ಅನುಸರಿಸಬೇಕಾದ ವಿಧಾನಗಳೇನು ?

29. ಸಹಾಯಕ ಸೈನ್ಯ ಪದ್ಧತಿಯ ಶರತ್ತುಗಳಾವವು ?

30. ವಿಶ್ವಸಂಸ್ಥೆಯ ಗುರಿ ಮತ್ತು ಉದ್ದೇಶಗಳಾವವು ?

31. ಭಾರತದಲ್ಲಿ ಬಾಲ್ಯವಿವಾಹ ಆಚರಣೆಗೆ ಕಾರಣಗಳನ್ನು ವಿವರಿಸಿ.

32. ಭಾರತದ ನೆರೆಯ ರಾಷ್ಟ್ರಗಳನ್ನು ಹೆಸರಿಸಿ.

33. ಭಾರತದ ಸಹಾಯವಿಲ್ಲದೆ ಎರಡನೆಯ ಮಹಾಯುದ್ಧದಲ್ಲಿ ಬ್ರಿಟನ್ ಪ್ರಬಲ ರಾಷ್ಟ್ರವಾಗಿ ಯುದ್ಧ ಮಾಡಲು ಆಗುತ್ತಿರಲಿಲ್ಲ. ದೃಢೀಕರಿಸಿ.

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

34. "ಬ್ರಿಟಿಷರ ಭೂಕಂದಾಯ ನೀತಿಯು ಭಾರತದ ಕೃಷಿಯಲ್ಲಿ ಮಹತ್ತರ ಬದಲಾವಣೆಯನ್ನು ತಂದಿತ್ತು.' ಸಮರ್ಥಿಸಿ.

**ಅಥವಾ**

"ತೀವ್ರವಾದಿಗಳು ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು." ಸಮರ್ಥಿಸಿ.

35. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೈನಿಕ ಮತ್ತು ಆರ್ಥಿಕ ಕಾರಣಗಳನ್ನು ವಿವರಿಸಿ.

36. ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಸುಧಾರಣೆಗೆ ತೆಗೆದುಕೊಂಡಿರುವ ಕ್ರಮಗಳನ್ನು ತಿಳಿಸಿ.

37. ಭತ್ತದ ಬೇಸಾಯವು ಗೋಧಿ ಬೇಸಾಯಕ್ಕಿಂತ ಹೇಗೆ ಭಿನ್ನವಾಗಿದೆ ?

KABRG-5030

VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5

a) ಬಾಂಬೆ ಹೈ

b) ಗುವಾಹಟಿ ಅ.ಹಾ-5

c) ಸೇಲಂ ಅ.ಹಾ-4

d) ಕೋರಮಂಡಲ ತೀರ ಅ.ಹಾ. 2

**ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)**

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. 5

KABRG-5030

---

ಕಲಿಕಾಸರೆ - ಪ್ರಶ್ನೆ ಪತ್ರಿಕೆ - ವಿಶ್ಲೇಷಣೆ.

| | | | |
|---|---|---|---|
| ಒಂದು ಅಂಕದ ಪ್ರಶ್ನೆಗಳು | — | 10 × 1 = | 10 |
| ಎರಡು " " | | 05 × 2 = | 10 |
| 3 " " | | 06 × 3 = | 18 |
| 4 " " | | 04 × 4 = | 16 |
| ನಕ್ಷೆ | | 1+3 = | 04 |
| | | | 58 |

ನಮ್ಮ ಉದ್ದೇಶ(ನಿರೀಕ್ಷಿತ) ಅಂಕ-50 — ಪ್ರಶ್ನೆ ಪತ್ರಿಕೆಯಲ್ಲಿ ಬಂದಿರುವುದು 58